# ಕಾಮನ ಬಿಲ್ಲು

## A ಬುದ್ದಿಗೆ ಗುದ್ದು...

ಒಬ್ಬ ತನ್ನ ಹಸುಗಳನ್ನು ಹೊಡೆದುಕೊಂಡು ಹೋಗುತ್ತಿದ್ದ. ಸಾಲಾಗಿ ಹೋಗುತ್ತಿದ್ದ ಹಸುಗಳನ್ನು ನೋಡಿದ ಮತ್ತೊಬ್ಬ ನಿನ್ನ ಬಳಿ ಎಷ್ಟು ಹಸುಗಳಿವೆ ಎಂದು ಕೇಳಿದ. ಆಗ ಅವನು ಒಂದು ಹಸುವಿನ ಮುಂದೆ ಎರಡು ಹಸುಗಳಿವೆ; ಹಾಗೆಯೇ ಮುಂದಿನ ಹಸುವಿನ ಹಿಂದೆ ಎರಡು ನಡೆಯುತ್ತಿವೆ. ಒಂದು ಮಧ್ಯೆ ಇದೆ ಎಂದ. ಹಾಗಾದರೆ ಅವನ ಬಳಿ ಎಷ್ಟು ಹಸುಗಳಿದ್ದವು..?



## B ಈ ಹಣ್ಣು ಯಾವುದು?

ಈ ಹಣ್ಣು ಮಲೇಷ್ಯಾ ಮತ್ತು ಇಂಡೊನೇಷ್ಯಾಗಳಲ್ಲಿ ಸಿಗುತ್ತದೆ. ಈ ಹಣ್ಣಿನ ವಾಸನೆ ಕೊಳೆತ ಮೀನಿನ ಹಾಗೆ ಇರುತ್ತದೆಯಂತೆ. ಆದರೆ ಸ್ಥಳೀಯರು ಇದನ್ನು ಉತ್ತಮ ಆಹಾರ ಎಂದು ಭಾವಿಸಿದ್ದಾರಂತೆ. ಹಾಗಾದರೆ ಈ ಹಣ್ಣು ಯಾವುದು ಎಂದು ಗುರುತಿಸಬಲ್ಲಿರಾ..?



## C ಗುಂಪಿಗೆ ಸೇರದ್ದನ್ನು ಪ್ರತ್ಯೇಕಿಸಿ

ಇವುಗಳಲ್ಲಿ ಜೋಡಿಗಳನ್ನು ಗುರುತಿಸಿ; ಗುಂಪಿಗೆ ಸೇರದ್ದನ್ನು ಹೊರಗೆ ಹಾಕಿ




## D ತಪ್ಪನ್ನು ಗುರುತಿಸಿ

ಮಂಗ ಜಾತಿಗೆ ಸೇರಿದವುಗಳಲ್ಲಿ ಗೊರಿಲ್ಲಾಗಳು ಗಾತ್ರದಲ್ಲಿ ದೊಡ್ಡವು. ಇವು ಆಫ್ರಿಕಾದ ಮಳೆಕಾಡುಗಳಲ್ಲಿ ಕಾಣಸಿಗುತ್ತವೆ. ದೊಡ್ಡ ಗಂಡು ಗೊರಿಲ್ಲಾ 200 ಕೇಜಿ ತೂಗುತ್ತವೆ ಮತ್ತು 1.8 ಮೀಟರ್ ಎತ್ತರವಿರುತ್ತದೆ. ಇವುಗಳಲ್ಲಿಯೂ ಮೂರು ರೀತಿಯವು ಇವೆ. ವೆಸ್ಟರ್ನ್ ಮತ್ತು ಈಸ್ಟರ್ನ್ ಲೋಲ್ಯಾಂಡ್ ಗೊರಿಲ್ಲಾ ಮತ್ತು ಮೌಂಟೇನ್ ಗೊರಿಲ್ಲಾ.

ಈಗ ಈ ಚಿತ್ರದಲ್ಲಿರುವ ವೈಲ್ಡ್ ಲೋಲ್ಯಾಂಡ್ ಗೊರಿಲ್ಲಾ ಏನನ್ನೋ ತಿನ್ನುತ್ತಿದೆ ಅಲ್ವಾ? ಇಲ್ಲಿ ಏನೋ ತಪ್ಪಾಗಿದೆ. ಅದನ್ನು ಗುರುತಿಸಬಲ್ಲಿರಾ?



### ಉತ್ತರಗಳು

ಎ.) ಮೂರು

ಬಿ.) ಡ್ಯುರಿಯನ್

ಸಿ.) 'ಎಚ್' ಗುಂಪಿಗೆ ಸೇರುವುದಿಲ್ಲ. ಎ-ಎಫ್, ಬಿ-ಐ, ಸಿ-ಕೆ, ಡಿ-ಜಿ ಮತ್ತು ಇ-ಜೆ ಜೋಡಿಗಳು.

ಡಿ.) ಆಫ್ರಿಕಾದ ಮಳೆ ಕಾಡುಗಳಲ್ಲಿ ವಾಸಿಸುವ ಗೊರಿಲ್ಲಾಗಳು ಅಪ್ಪಟ ಸಸ್ಯಾಹಾರಿಗಳು. ಚಿತ್ರದಲ್ಲಿರುವ ಗೊರಿಲ್ಲಾ ಮಾಂಸದ ತುಂಡು ಒಂದನ್ನು ತಿನ್ನುತ್ತಿದೆ.

*349 / © 2010 Amrita Bharati, Bharatiya Vidya Bhavan*